**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No. 209/2021**

ಪಿ**.**ಡಬ್ಲ್ಯೂ**. 1**

ದಿನಾಂಕಃ **19.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ನ್ಯಾಯಾಲಯದ ಅನುಮತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ**.**ಹೆಚ್**.**ವಿ**.**ಎಸ್**.** ವಕೀಲರಿಂದ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು**.**

| | |
|---|---|
| ನಿ.ಪಿ.13 | ದಿ.04.02.2021 ರಂದು ಕಲಂ.64 ಕಾಯ್ದೆ 2013 ರ ಅಡಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಂದೆ ಅರ್ಜಿದಾರರು ಸಲ್ಲಿಸಿದ ಅರ್ಜಿ |
| ನಿ.ಪಿ.14 | ವಿಶೇಷ ಭೂ ಸ್ವಾಧೀನಾಧಿಕಾರಿಗಳು ಅರ್ಜಿ ಸ್ವೀಕರಿಸಿದ ದಿನಾಂಕ 04.02.2021 ರ ಮೊಹರು ಇರುವ ಇಂಡೆಕ್ಸ್ ಫಾರಂ. |

ಪಾಟೀ ಸವಾಲು ಃ ಎದುರುದಾರರ ಪರವಾಗಿ ಶ್ರೀ. ಎಂಬಿಎನ್.ವಕೀಲರಿಂದ

1. ದಿ.03.12.2018 ರಂದು ನನಗೆ ಮೊದಲ ನೋಟೀಸ್ ಜಾರಿಯಾಗಿದೆ. ದಿ.17.06.2020 ರಲ್ಲಿ ನನಗೆ 2 ನೇ ನೋಟೀಸ್ ಜಾರಿಯಾಗಿರುತ್ತೆ. 2 ನೋಟೀಸ್ ಜಾರಿಯಾದ ನಂತರ ನನಗೆ ತಕರಾರು ಸಲ್ಲಿಸಲು ತೊಂದರೆ ಇರಲಿಲ್ಲ. ದಿ.09.12.2020 ರಲ್ಲಿ ನನಗೆ ಅವಾರ್ಡ್ ನೋಟೀಸ್ ಜಾರಿಯಾಗಿದೆ. ದಿ.04.02.2021 ರಲ್ಲಿ ನಾನು ನಿ.ಪಿ.13 ರೆಫರೆನ್ಸ ಪಿಟೀಷನ್ ಸಲ್ಲಿಸಿದ್ದೇನೆ. ನಿ.ಪಿ.13 ಕಾಲಮಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸ್ವಾಧೀನವಾದ ಜಮೀನಿನನಲ್ಲಿ 1 ನೇ ಎದುರುದಾರರ ಇಲಾಖೆಯ ಅಧಿಕಾರಿಗಳು

ಕಂದಾಯ ಅಧಿಕಾರಿಗಳು, ಭೂ ಮಾಪಕ ಅಧಿಕಾರಿಗಳು ಪರಿಶೀಲಿಸಿದ್ದರು ಎಂದರೆ ಸರಿಯಲ್ಲ. ದಿ.08.11.2015 ರಿಂದ 08.11.2018 ರ ಅವಧಿಯ ನೊಂದಾಯಿತ ಕ್ರಯಪತ್ರಗಳನ್ನು ಪರಿಶೀಲಿಸಿ ಪರಿಹಾರ ನಿಗಧಿಪಡಿಸಿದ್ದರು ಎಂದರೆ ಸರಿಯಲ್ಲ. ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ನನ್ನ ಹೇಳಿಕೆ ಪಡೆದು ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಪಾವತಿಸಿದ್ದರೂ ನಾನು ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಜಮೀನು ವರ್ತಿಕಟ್ಟೆ ಗ್ರಾಮದಲ್ಲಿದೆ. ವರ್ತಿಕಟ್ಟೆ ಮತ್ತು ಹೊಸಕೆರೆ ಬೇರೆ ಬೇರೆ ಗ್ರಾಮಗಳು ಆದರೆ ಎರಡೂ ಅಕ್ಕಪಕ್ಕದಲ್ಲಿದೆ. 2 ಗ್ರಾಮದ ಜಮೀನಿಗಳಿಗೂ ಬೇರೆ ಬೇರೆ ನೋಟಿಫಿಕೇಷನ್ ಅನ್ವಯ ಸ್ವಾಧಿನಗೊಂಡಿರುತ್ತದೆ ಎಂದರೆ ಸರಿಯಲ್ಲ. ವರ್ತಿಕಟ್ಟೆ ಮತ್ತು ತೆವಡೇ ಹಳ್ಳಿ ಗ್ರಾಮ ಬೇರೆ ಬೇರೆ ಎಂದರೆ ಸರಿ . ಸಾಕ್ಷಿ ಎರಡೂ ಗ್ರಾಮಗಳು ಅಕ್ಕಪಕ್ಕದಲ್ಲಿ ಇದೆ ಎಂದು ನುಡಿದಿರುತಾತರೆ. ಹೊಸಕೆರೆ, ವರ್ತಿಕಟ್ಟೆ ಮತ್ತು ತೆವಡೇ ಹಳ್ಳಿ ಅಕ್ಕಪಕ್ಕದಲ್ಲಿ ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ನಿ.ಪಿ.10 ಮತ್ತು 11 ರ ಕ್ರಯಪತ್ರಗಳು ನಮ್ಮ ಗ್ರಾವಕ್ಕೆ ಸಂಬಂಧಿಸದೇ ಇರುವುದರಿಂದ ನಾನು ಈ ಪ್ರಕರಣದಲ್ಲಿ ಹೆಚ್ಚು ಪರಿಹಾರ ಪಡೆಯಲು ಪೂರಕ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ. ವರ್ತಿಕಟ್ಟೆ ಗ್ರಾಮಕ್ಕೆ ಸಂಬಂಧಿಸಿದ ಕ್ರಯಪತ್ರ ವನ್ನು ಪರಿಶೀಲಿಸಿ

ಪರಿಹಾರದ ಹಣವನ್ನು ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಮೌಲ್ಯಕ್ಕಿಂತ 4 ಪಟ್ಟು ಹೆಚ್ಚು ಹಣವನ್ನು ಪರಿಹಾರವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಗ್ರಾಮದ ನೊಂದಾಯಿತ ಕ್ರಯಪತ್ರ ಅಥವಾ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಿ.ಪಿ.13 ಕಾಲಮಿತಿಯಲ್ಲಿ ಹಾಜರುಪಡಿಸದೇ ಇರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು